**ದಿ: 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಕೆ ಎಸ್ ಆರ್ ಕೆ ವಕೀಲರಿಂದ: -**

1. ಯಾವುದೇ ಆಸ್ತಿ ಜಂಟಿಯಾಗಿ ಖರೀದಿ ಮಾಡಿದರೆ ಮುಟೇಶನ್ ಜಂಟಿಯಾಗಿ ಆಗುತ್ತದೆ ಅದೇ ರೀತಿ ಒಬ್ಬರೆ ಆಸ್ತಿಯನ್ನು ಖರೀದಿ ಮಾಡಿದರೆ ಒಬ್ಬರ ಹೆಸರಿಗೆ ಮುಟೇಶನ್ ಆಗುತ್ತದೆ ಎಂದರೆ ಸರಿ. ನೀವು ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ -2 ರಲ್ಲಿ 02 ದಾವಾ ಆಸ್ತಿಗಳ ಸರ್ವೆ ನಂಬರ್ ಹಿಸ್ಸಾಗಳನ್ನು ಮತ್ತು ಅದರ ಚಕ್ ಬಂದಿಯನ್ನು ಬರೆಸಿರಿವುದಿಲ್ಲ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ಖರೀದಿ ಪತ್ರ ಮಾಡಿದಾಗ, ಅದರಲ್ಲಿ ಬಸವರಾಜ ಎಂದು ಒಂದೇ ಹೆಸರು ಇತ್ತು. ಖರೀದಿ ಪತ್ರ ಆದ ಮೇಲೆ 2000 ನೇ ಇಸ್ವಿಯಲ್ಲಿ ಪ್ರತಿವಾದಿ ದಾವಾ ಆಸ್ತಿಯನ್ನು ವ್ಯವಹಾರಿಕ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಅರ್ಜಿಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದಾಗ ನೀವು ಅದಕ್ಕೆ ತಕರಾರು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಏನೂ ತಿಳಿಸಿರುವುದಿಲ್ಲ ಎನ್ನುತ್ತಾರೆ. 2000-01 ರಲ್ಲಿ ಭೂ ಪರಿವರ್ತನೆ ಆದೇಶ ಆದ ನಂತರ ದಾವಾ ಜಮೀನಿನಲ್ಲಿ ಶ್ರೀ ಕೃಷ್ಣ ಬ್ರಿಕ್ಸ್ ಸಿಮೆಂಟ್ ಇಟ್ಟಂಗಿ ಗೋಸ್ಕರ ಕೆ ಎಫ್ ಎಸ್ ಸಿ ಯಲ್ಲಿ ಸಾಲ ಪಡೆದಾಗ ನೀವು ಅದಕ್ಕೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಏನೂ ತಿಳಿಸಿರುವುದಿಲ್ಲ ಎನ್ನುತ್ತಾರೆ. 2000 ನೇ ಇಸ್ವಿಯಲ್ಲಿ ಖರೀದಿ ಪತ್ರ ಆದ ನಂತರ ಪ್ರತಿವಾದಿ ಹೆಸರಿಗೆ ಮುಟೇಶನ್ ಆದ ಮೇಲೆ ತಕರಾರು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಸಲ್ಲಿಸಿದ್ದೇನೆ ಎನ್ನುತ್ತಾರೆ. ತಕರಾರು ಅರ್ಜಿ ಸಲ್ಲಿಸಿದ ನಕಲು ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

2. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ನೀವು ಯಾವ ವರ್ಷದಿಂದ ಯಾವ ವರ್ಷದವರೆಗೆ ಆಂದ್ರ ಪ್ರದೇಶಕ್ಕೆ ಕೂಲಿ ಕೆಲಸ ಮಾಡಲು ಹೋಗಿದ್ದೀರಾ ಮತ್ತು ಆಂದ್ರ ಪ್ರದೇಶದಲ್ಲಿ ಯಾವ ಊರಿನಲ್ಲಿ ಕೂಲಿ

ಕೆಲಸ ಮಾಡಿದ್ದೀರಾ ಎಂದು ಬರೆಸಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮತ್ತು ಪ್ರತಿವಾದಿ ಜಂಟಿಯಾಗಿ ಯಾವುದಾದರೂ ಜಮೀನನ್ನು ಖರಿದಿ ಮಾಡಿದ್ದಿರಾ ಎಂದರೆ ಸಾಕ್ಷಿಯು ಮಾಡಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ದಿನಾಂಕ: 15-07-2020 ರಂದು ನೀವು ಮತ್ತು ಪ್ರತಿವಾದಿ ಇಬ್ಬರೂ ಜಂಟಿಯಾಗಿ ಬಂಡೆ ಗುಡ್ಡ ಗ್ರಾಮದ ಸ ನಂ 14/*/2, ವಿಸ್ತೀರ್ಣ 02-00 ಎಕರೆ ಜಮೀನು ಖರೀದಿ ಮಾಡಿದ್ದೀರಾ ಎಂದು ಖರೀದಿ ಪತ್ರವನ್ನು ತೋರಿಸಲಾಗಿ ಸಾಕ್ಷಿ ನೋಡಿ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಿ ಡಿ 1 ರ ಜಮೀನನ್ನು ಯಾರು ಯಾರು ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ಪ್ರತಿವಾದಿ ಸಾಗುವಳಿ ಮಾಡುತ್ತೇವೆ ಎನ್ನುತ್ತಾರೆ. ಸುಮಾರು 25 ವರ್ಷಗಳ ಹಿಂದೆ ದಾವಾ ಆಸ್ತಿಯಲ್ಲಿ ಶ್ರೀ ಕೃಷ್ಣ ಬ್ರಿಕ್ಸ್ ಸಿಮೆಂಟ್ ಇಟ್ಟಂಗಿ ಮಾಡುವ ಮುಂಚೆ ಪ್ರತಿವಾದಿ ಲಾರಿಗಳನ್ನು ಹೊಂದಿದ್ದರು ಎಂದರೆ ಸಾಕ್ಷಿಯು ಲಾರಿ ಇರಲಿಲ್ಲ ಟ್ರ್ಯಾಕ್ಟರ್ ಇತ್ತು ಎಂದು ಹೇಳುತ್ತಾರೆ. ನಿಮ್ಮ ಹೆಸರು ಸಣ್ಣ ಬಸವರಾಜ ಆಗಿರುವುದಿಲ್ಲ ಬಸ್ಸಪ್ಪ ಎಂದರೆ ಸಾಕ್ಷಿಯು ಸಣ್ಣ ಬಸವರಾಜ ಎಂದು ಹೇಳುತ್ತಾರೆ. ಪ್ರತಿವಾದಿಯ ಹೆಸರು ಸಣ್ಣ ಬಸವರಾಜ ಅಲಿಯಾಸ ಬಸವರಾಜ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ಹಳ್ಳಿಯಲ್ಲಿ ಬಸವರಾಜ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ನಿಮ್ಮ ಮಗನ ಆಧಾರ ಕಾರ್ಡ್ ನಲ್ಲಿ ನಿಮ್ಮ ಹೆಸರು ಬಸ್ಸಪ್ಪ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಆಧಾರ ಕಾರ್ಡ್ ಇದ್ದರೆ ತೋರಿಸಿ ಎಂದು ಹೇಳುತ್ತಾರೆ. ಸಾಕ್ಷಿಗೆ ಪರಮೇಶ ತಂದೆ ಬಸ್ಸಪ್ಪ ಆಧಾರ ಕಾರ್ಡ್ ನಂಬರ್ 670176676994 ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಆಧಾರ ಕಾರ್ಡ್ ನನ್ನ ಮಗನಿಗೆ ಸೇರಿದ್ದು ಅದನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುತ್ತಾರೆ.

3. ಅದೇ ರೀತಿ ಸಾಕ್ಷಿಗೆ ಗಂಗಮ್ಮ ಗಂಡ ಬಸ್ಸಪ್ಪ ಇವರಿಗೆ ಸೇರಿದ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ತೋರಿಸಲಾಗಿ ಅದರಲ್ಲಿ ನಿಮ್ಮ ಹೆಸರು ಬಸ್ಸಪ್ಪ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ಅದನ್ನು ನೋಡಿ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿ ಡಿ 2 ಎಂದು ಗುರುತಿಸಲಾಯಿತು. ಅದೇ ರೀತಿ ಬಿ ಪಿ ಎಲ್ ಪಡಿತರ ಚೀಟಿಯಲ್ಲಿ ನಿಮ್ಮ ಹೆಸರು ಬಸ್ಸಪ್ಪ ಎಂದು ನಮೂದು ಮಾಡಿದ್ದಾರೆ ಮತ್ತು ನಿಮ್ಮ ಹೆಂಡತಿ ಮಕ್ಕಳ ಛಾಯಾ ಚಿತ್ರ ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ನಿ ಡಿ -1 ಕ್ರಯಪತ್ರ ಮತ್ತು ನಿ ಡಿ -2 ಆದಾಯ ಮತ್ತು ಜಾತಿ ಪ್ರಮಾಣಪತ್ರದಲ್ಲಿ ಮತ್ತು ನಿಮ್ಮ ಮಗನ ಆಧಾರ ಕಾರ್ಡ್ ನಲ್ಲಿ ನಿಮ್ಮ ಹೆಸರು ಬಸ್ಸಪ್ಪ ಎಂದು ಇರುತ್ತದೆ ನಿಮ್ಮ ಹೆಸರು ಸಣ್ಣ ಬಸವರಾಜ ಆಗಿರುವುದಿಲ್ಲ ಪ್ರತಿವಾದಿಯ ಹೆಸರು ಸಣ್ಣ ಬಸವರಾಜ ಉರ್ಫ್ ಬಸವರಾಜ ಎಂದು ಇದೆ ಎಂದರೆ ಸಾಕ್ಷಿಯು ಅದು ಹೇಗೆ ಆಗುತ್ತದೆ ಎಂದು ಹೇಳುತ್ತಾರೆ.

4. ನಿಮ್ಮ ಸಾಕ್ಷಿ ಪ್ರಮಾಣ ಪತ್ರ ಮತ್ತು ನಿಮ್ಮ ವಾದ ಪತ್ರದಲ್ಲಿ ಬೇರೆ ಬೇರೆ ವಿಷಯಗಳನ್ನು ನಮೂದು ಮಾಡಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಖಂಡಿಗೆ 3 ರಿಂದ 5 ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನಿಮಗೆ ಹೇಳಲು ಆಗುತ್ತಿದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ 25 ವರ್ಷಗಳಿಂದ ಶ್ರೀ ಕೃಷ್ಣ ಬ್ರಿಕ್ಸ್ ಸಿಮೆಂಟ್ ಇಟ್ಟಂಗಿ ಯನ್ನು ಪ್ರತಿವಾದಿ ಮತ್ತು ಅವರ ಹೆಂಡತಿ ಮತ್ತು ಮಕ್ಕಳು ಎಲ್ಲರೂ ಕೂಡಿ ನಡೆಸುತ್ತಾರೆಯೋ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ 25 ವರ್ಷಗಳಿಂದ ಶ್ರೀ ಕೃಷ್ಣ ಬ್ರಿಕ್ಸ್ ಸಿಮೆಂಟ್ ಇಟ್ಟಂಗಿ ಯನ್ನು ಯಾರು ಯಾರು ನಡೆಸುತ್ತಿದ್ದರೂ ಎಂದು ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು 25 ವರ್ಷಗಳಿಂದ ಇಲ್ಲ 6-7 ವರ್ಷಗಳಿಂದ ನಡೆಸುತ್ತಿದ್ದರು ಅವರ ಮಕ್ಕಳು ಚಿಕ್ಕವರಾಗಿದ್ದು,

ಅವರ ಹೆಂಡತಿ ಅಲ್ಲೆ ಇದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವು ಮತ್ತು ಪ್ರತಿವಾದಿ ಜಂಟಿಯಾಗಿ 25 ವರ್ಷಗಳಿಂದ ಸಾಗುವಳಿ ಮಾಡುತ್ತಿಲ್ಲ, ಯಾಕೆಂದರೆ ದಾವಾ ಜಮೀನಿನಲ್ಲಿ 25 ವರ್ಷಗಳಿಂದ ಶ್ರೀ ಕೃಷ್ಣ ಬ್ರಿಕ್ಸ್ ಸಿಮೆಂಟ್ ಇಟ್ಟಂಗಿ ಯನ್ನು ಪ್ರತಿವಾದಿ ಎನ್ ಎ ಮಾಡಿಸಿ ನಡೆಸುತ್ತಿದ್ದಾರೆ ಇದು ಕೃಷಿ ಭೂಮಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಹೇಳದೆ ಮಾಡಿಕೊಂಡಿದ್ದಾರೆ ಎನ್ನು ತ್ತಾರೆ. ನಿಮ್ಮ ಹೆಸರು ಬಸ್ಸಪ್ಪ ಅಂತಾ ಇದ್ದು, ಪ್ರತಿವಾದಿಯ ಹೆಸರು ಸಣ್ಣ ಬಸವರಾಜ ಉರ್ಫ್ ಬಸವರಾಜ ಅಂತಾ ಇದ್ದು, ದಾವಾ ಆಸ್ತಿಯ ಕ್ರಯ ಪತ್ರವನ್ನು ನೀವು ಇದೇ ಕಾರಣಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎನ್ನು ತ್ತಾರೆ. ನಿಮ್ಮ ಅಣ್ಣನ ಹೆಸರು ಸಣ್ಣ ಬಸವರಾಜ ಉರ್ಫ ಬಸವರಾಜ ಅಂತಾ ಇದ್ದು ಅವರು ತಮ್ಮ ಸ್ವಂತ ದುಡಿಮೆಯಿಂದ ದಾವಾ ಜಮೀನನ್ನು ಖರೀದಿ ಮಾಡಿದ್ದು ಇದೇ ಕಾರಣಕ್ಕೆ ನೀವು ದಾವಾ ಜಮೀನಿನ ಕ್ರಯಪತ್ರದ ದೃಢೀಕೃತ ನಕಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎನ್ನು ತ್ತಾರೆ. ಖರೀದಿ ಪತ್ರದ ನೋಂದಣಿ ಸಂಖ್ಯೆ ಮತ್ತು ವಿವರಗಳನ್ನು ಹೇಳುತ್ತೀರಾ ಎಂದರೆ ಸಾಕ್ಷಿಯು ತೋರಿಸಿದರೆ ಹೇಳುತ್ತೇನೆ ಎನ್ನು ತ್ತಾರೆ. ನಿ ಡಿ -1 ಕ್ರಯಪತ್ರದಲ್ಲಿ ನಿಮ್ಮ ಹೆಸರು ಬಸ್ಸಪ್ಪ ಅಂತಾ ಇದ್ದು ಅದಕ್ಕೆ ನೀವು ಹೆಬ್ಬೆಟ್ಟು ಒತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನು ತ್ತಾರೆ. ನಿಮ್ಮ ಹೆಸರು ಸಣ್ಣ ಬಸವರಾಜ ಎಂದು ಸುಳ್ಳು ಹೇಳಿ ಬರೆಸಿದ್ದೀರಾ ನಿಮ್ಮ ಹೆಸರು ಬಸ್ಸಪ್ಪ ಅಂತಾ ಇದ್ದು, ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

5. ದಾವಾ ಆಸ್ತಿಗೆ ಸೇರಿದ ಇ ಸ್ವತ್ತು ಖಾತಾ ನಮೂನೆ 9 ಮತ್ತು 11(ಎ) ರಲ್ಲಿ ಪ್ರತಿವಾದಿಯ ಛಾಯಾ ಚಿತ್ರ ಇದೆ ಎಂದರೆ ಸಾಕ್ಷಿಯು ಇದೆ ಎನ್ನು ತ್ತಾರೆ. ಸಾಗುವಳಿ ಹೊಲಗಳು ಇದ್ದಲ್ಲಿ ಪಂಚಾಯಿತಿಯವರು ಆನ್ ಲೈನ್ ಖಾತಾ ಫಾರಂ ನಂಬರ್ 9 ಮತ್ತು 11(ಎ) ಇವುಗಳನ್ನು

ನೀಡುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಯ ಹೆಸರು ಸಣ್ಣ ಬಸವರಾಜ ಉರ್ಫ್ ಬಸವರಾಜ ಅಂತಾ ಇದ್ದು ಅವರ ಹೆಸರಿನಲ್ಲಿ ಪಂಚಾಯಿತಿಯಲ್ಲಿ ಫಾರಂ ನಂಬರ್ 9 ಮತ್ತು 11(ಎ) ನೀಡಿದ್ದು ಈ ವಿಷಯ ನಿಮಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮಾನಸಿಕ ಮತ್ತು ಆರ್ಥಿಕ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ